
ಈ ವಾರ ಅವಳು ಬರಬೇಕು' ಎಂದು ಪ್ರತಿದಿನ ಎದ್ದು ಹುರುಪಾಗಿ ಸಂಜೆಯತನಕವೂ ಆ ಹುರುಪಿನಲ್ಲಿಯೇ ದುಡಿದು, ಬಾರದಿದ್ದ ನಂತರ ದಣಿವೆನಿಸಿ ಹಾಯಾಗಿ ಮಲಗಿಬಿಡುತ್ತಿದ್ದಳು. ಮತ್ತೆ ಮರುದಿನ ಅದೇ ಯೋಚನೆ. 'ನನ್ನ ಮಗಳು ಯಾವುದೇ ಹೊತ್ತಿಗೆ ಬಂದು ಬಾಗಿಲ ತಟ್ಟಬಹುದು– ಅಕ್ಕಾ ಎಂದು ಕರೆಯಬಹುದು.'

ಬರಬರುತ್ತ ಹೊತ್ತು ಇಳಿದು ಸಂಜೆಯಾಯಿತು. ಕತ್ತಲು ಊರಿನ ಸಂದಿನೊಳಗಿಂದ ಹರಿದು ಬಂದು ಊರನ್ನೇ ಅಪ್ಪಿತ್ತು. ಗ್ರಾಮ ಪಂಚಾಯತಿಯ ಸಿಪಾಯಿ ಊರಿನ ದೀಪದ ಕಂಬಗಳಿಗೆಲ್ಲ ದೀಪ ಹಚ್ಚಿಹೋಗಿದ್ದ. ಆದರೆ ಅವನು ಮನೆ ಮುಟ್ಟುವ ಮೊದಲೇ ದೀಪಗಳೆಲ್ಲ ಇದ್ದ ಜಾಗದಿಂದ ಕಾಲ್ತೆಗೆದಿದ್ದವು. ಇದ್ದ ಒಂದೆರಡು ದೀಪಗಳು, ಹೆಚ್ಚು ಎಣ್ಣೆ ಹಾಕಿಸಿಕೊಂಡೆವಲ್ಲ ಎಂದು ಮರುಗುತ್ತಿವೆಯೋ ಏನೋ ಎಂಬಂತೆ ಸಣ್ಣಾಗುತ್ತಲಿದ್ದವು. ಸೀತಕ್ಕನಿಗೆ ಬೆಳಗಿನಿಂದ ಒಳ್ಳೆಯ ಸೂಚನೆಗಳಾಗುತ್ತಿದ್ದವು. ಬೆಂಕಿ 'ಭುರ್' ಎಂದಿತ್ತು– ಚಕ್ಕಲಿಯ ಕಾವಲಿಗೆ ಏರಿಸುವಾಗ, ಇದು ಮುನ್ಸೂಚನೆಯಂತೆ. ಅದರಲ್ಲಿಯೂ ಸೀತಕ್ಕನಿಗೆ ಇಂಥ ಶಕುನಗಳಲ್ಲಿ ಭಾರಿ ನಂಬಿಕೆ. ಅವಲಕ್ಕಿ, ಚಕ್ಕುಲಿಗಳ ಡಬ್ಬಿ ಕಂಕುಳಲ್ಲಿಟ್ಟು ಮನೆಯಿಂದ ಹೊರಗೆ ಕಾಲಿಡುವಾಗ ಒಳ್ಳೆಯ ಶಕುನವಾಗಬೇಕು ಅವಳಿಗೆ. ಆಗ, ಪಕ್ಕದ ಮನೆಯ ಕಾಶಿಬಾಯಿ ಎದುರು ಬಂದರೆ ಮುಗಿದೇಹೋಯಿತು. ತಾನು ವಿಧವೆಯೆಂಬುದನ್ನು ಮರೆತು ಅವಳನ್ನು ಬಯ್ಯುತ್ತಾಳೆ. ಮನಸ್ಸಿನಲ್ಲಿಯೇ. ಆಮೇಲೆ ಒಳಗೆ ತಿರುಗಿ ಹೋಗಿ ಎಲೆಅಡಿಕೆ ಹಾಕಿಕೊಂಡು, ಕುಳಿತು ಮತ್ತೆ ಹೊರಗೆ ಬರಬೇಕು. ಆದರೆ ಇಂದಿನ ಶಕುನಗಳೆಲ್ಲ ಯಾರಾದರೂ ಬರುವ ಶಕುನಗಳು. ಬರುವವರಾದರೂ ಯಾರು? ತನ್ನ ಮಗಳು, ಮತ್ತ್ಯಾರು! ಹಾಗೆಂದು ಸಂಜೆಯ ಅನ್ನ ಅದೇ ಚಕ್ಕಲಿಯ ಒಲೆಯಲ್ಲಿ ಬೆಂದು ನಿಂತಿದ್ದುದರಿಂದ ಅದನ್ನು ಬಾಗಿಸಿ ಹಾಕಿ ಅನ್ನ ಕೆಳಗಿಟ್ಟು, ಬೆಂಕಿ ಧಗಧಗ ಎನ್ನುವಲ್ಲಿ ಚೆಂಬು ನೀರು ಸಿಂಪಡಿಸಿದಳು. ಆದರೂ ಆರದ ಬೆಂಕಿಯನ್ನು ನೋಡುತ್ತ ಸೀರೆಯ ಸೆರಗಿಗೆ ಕೈ ಒರೆಸಿಕೊಳ್ಳುತ್ತಿರುವಷ್ಟರಲ್ಲಿ ಕದ ತಟ್ಟಿದ ಹಾಗೆನಿಸಿತು. 'ಹೌದು' ಎಂದು ಅವನ್ನು ಅಲಸರವಾಗಿ ದೃಢಪಡಿಸಿ–



'ಹೌದು ಯಾರೋ ಬಂದರು... ನನ್ನ ಪೋರಿ ಮತ್ತ್ಯಾರು' ಎಂದು ಹೆಗಲ ಮೇಲೆಯೇ ಬಹಳ ಹೊತ್ತು ಇದ್ದ ಸೆರಗನ್ನು ತಲೆಯ ಮೇಲೆ ಹಾಕಿ ಕಿವಿಯ ಹಿಂಬದಿಯಿಂದ ಅದನ್ನು ತಂದು, ಇಳಿದು ಬಂದ ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ ಧರ ಧರನೆ ಹೊರಗೆ ಬಂದಳು. ಬಂದು ಕದದ ಚಿಲಕಕ್ಕೆ ಕೈ ಇಟ್ಟಳು. ಕದ ತೆರೆಯಿತು. ತೆರೆದ ಕದ ಹಾಗೆಯೇ ಧಡಾರನೆ ಮತ್ತೆ ಮುಚ್ಚಿಕೊಂಡಿತು. ಸೀತಕ್ಕ ಅದನ್ನು ಒತ್ತಿ ಹಿಡಿದೇ ಧಪ್ಪನೆ ನೆಲಕ್ಕೆ ಮುಕ್ಕರಿಸಿಬಿದ್ದಳು. ಕಣ್ಣು ಮೇಲೆ ಹತ್ತಿಕೊಂಡವು. ಬಾಯಿಯಿಂದ ಶಬ್ದ ಬಾರದ ಹಾಗಾಯಿತು.